ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಸದಸ್ಯರ ಜೊತೆ ಮಾತನಾಡಿಕೊಂಡು ಇದಕ್ಕೆ ಒಂದು ಪರಿಹಾರವನ್ನು ಹುಡುಕುತ್ತೇನೆ.

ನಿಯಮ 334ರ ಮೇರೆಗೆ

ಬೆಂಗಳೂರು ನಗರದಲ್ಲಿ ರಸ್ತೆ ಅಪಘಾತಗಳನ್ನು ಹಾಗೂ ಸಂಚಾರ ವ್ಯವಸ್ಥೆಗಳನ್ನು ಉತ್ತಮಪಡಿಸಲು ಉನ್ನತಮಟ್ಟದ ಸಮಿತಿ ರಚನೆ

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಉಪಾಧ್ಯಕ್ಷೆಯವರೆ, ಬೆಂಗಳೂರು ನಗರದಲ್ಲಿ ವಾಹನ ಅಪಘಾತಗಳು ಹೆಚ್ಚಾಗುತ್ತಿದ್ದು, ವಾಹನಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದರಿಂದ ಸಂಚಾರ ವ್ಯವಸ್ಥೆಯನ್ನು ಉತ್ತಮಪಡಿಸುವುದು ಅಗತ್ಯವಾಗಿದೆ. ಕೆಲವಾರು ಜಾಗಗಳಲ್ಲಿ ಹೊಸದಾಗಿ ಸಿಗ್ನಲ್ ದೀಪಗಳನ್ನು ಹಾಕಬೇಕಾಗಿದೆ. ಕೆಲವಾರು ರಸ್ತೆಗಳನ್ನು ಅಗಲಮಾಡಬೇಕಾಗಿದೆ ಹಾಗೂ ಕೆಲವು ರಸ್ತೆಗಳಲ್ಲಿ ಏಕಮುಖ ಮಾರ್ಗ ವಿಧಿಸಬೇಕಾಗಿದೆ. ಇದರ ಜೊತೆಗೆ ಕೆಲವು ರಸ್ತೆಗಳಲ್ಲಿ ಕೆಲವಾರು ವಾಹನಗಳ ನಿರ್ಬಂಧವನ್ನು ವಿಧಿಸಬೇಕಾಗಿದೆ. ಆಟೋರಿಕ್ಷಾ ನಿಲ್ದಾಣವನ್ನು ಹಲವಾರು ಭಾಗಗಳಲ್ಲಿ ನಿರ್ಮಿಸಬೇಕಾಗಿದೆ. ಈಗ ಬಸ್ ನಿಲ್ದಾಣಗಳ ಬಳಿಯಲ್ಲಿಯೇ ಆಟೋರಿಕ್ಷಾಗಳು ನಿಲ್ಲಿಸಿ ಬಸ್ ಹತ್ತುವ ಪ್ರಯಾಣಿಕರಿಗೆ ತೊಂದರೆಯುಂಟಾಗಿದೆ. ಆದ್ದರಿಂದ ಬೆಂಗಳೂರು ನಗರದ ರಸ್ತೆ ಸಾರಿಗೆ ವ್ಯವಸ್ಥೆಯನ್ನು ಉತ್ತಮಪಡಿಸಲು ಹಾಗೂ ಅಪಘಾತಗಳನ್ನು ತಪ್ಪಿಸಲು ಬೆಂಗಳೂರು ನಗರದ ಪೋಲೀಸ್ ಕಮೀಷನರ್ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ನೇಮಿಸಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಕೋರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಯವರು) : ಸನ್ಮಾನ್ಯ ಉಪಾಧ್ಯಕ್ಷೆಯವರೇ, ಈ ಬಗ್ಗೆ ನಿನ್ನೆ ತಾನೆ ಕೆಲವು ಹೇಳಿಕೆಗಳನ್ನು ನಾನು ಕೊಟ್ಟಿದ್ದೆ. ಮೋಟಾರ್ ವೆಹಿಕಲ್ಸ್ ಆಕ್ಟ್ ಪ್ರಕಾರ ರಾಜ್ಯಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಕೆಲವು ಉನ್ನತ ಸಮಿತಿಗಳನ್ನು ನಾವು ಮಾಡುತ್ತೇವೆಂದು ಹೇಳಿದ್ದೆ. ಅದನ್ನು ಮಾಡುತ್ತಿದ್ದೇವೆ. ಇನ್ನು ಎರಡನೆಯದಾಗಿ, ಈ ಬೆಂಗಳೂರು ನಗರಕ್ಕೆ ತನ್ನದೇ ಆದ ಸೀಮಿತ ಸಮಸ್ಯೆಗಳು ಇವೆ. ಅವನ್ನು ಪರಿಹಾರ ಮಾಡುವುದಕ್ಕೆ ಮತ್ತು ಇದರ ಬಗ್ಗೆ ಎಲ್ಲಾ ಇಡೀ ಕರ್ನಾಟಕ ರಾಜ್ಯದ ಈ ಅಪಘಾತಗಳನ್ನು ತಪ್ಪಿಸುವ ಬಗ್ಗೆ ಉನ್ನತಾಧಿಕಾರಿಗಳಾದ ದಿನಕರ್‌ರವರು ವರದಿ ಕೊಟ್ಟಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿ ಇವೆ. ವರದಿಯಲ್ಲಿ ಏನು ಶಿಫಾರಸ್ಸು ಮಾಡಿದ್ದಾರೆ ಅದನ್ನು ಅನುಷ್ಠಾನ ಮಾಡುವುದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

ಮೈಸೂರು ಜಿಲ್ಲೆ ಕೊಳ್ಳೇಗಾಲದ ಕಸಬಾ ಹೋಬಳಿಯ ಕಬಿನಿ ನಾಲೆ ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ರೈತರಿಗೆ ಹೆಚ್ಚು ನೀರಾವರಿ ತೆರಿಗೆ

ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಅಧ್ಯಕ್ಷೆಯವರೇ, ಮೈಸೂರು ಜಿಲ್ಲೆ ಕೊಳ್ಳೇಗಾಲದ ಕಸಬಾ ಹೋಬಳಿಯ ಕಬಿನಿ ನಾಲೆ ಅಚ್ಚುಕಟ್ಟು ಬರುವ ಜಮೀನುಗಳಿಗೆ ನೀರಾವರಿ ತೆರಿಗೆ ಎಕರೆ 1ಕ್ಕೆ 35-00 ರೂಪಾಯಿ ನಿಗದಿ ಮಾಡಿದ್ದರೂ ಸಹ ನೀವು ಅರೆ ಖುಷ್ಕಿ ಬೆಳೆ ಬೆಳೆಯದೆ ಭತ್ತವನ್ನು

ಬೆಳೆದಿರುವುದರಿಂದ ನೀವು ಶಿಕ್ಷಾರ್ಹರು ಎಂದು ಹೇಳಿ ಹತ್ತುಪಟ್ಟು ದಂಡ ಅಂದರೆ ಎಕರೆ 1ಕ್ಕೆ ರೂ. 350-00 ದಂಡ ಹಾಕಿರುತ್ತಾರೆ. ಇದರಿಂದ ರೈತರಿಗೆ ಅನ್ಯಾಯವಾಗಿರುವುದರಿಂದಲೂ, ಜಲಾಶಯ ನಿರ್ಮಾಣ ಮಾಡುವಾಗ ಆಚ್ಚುಕಟ್ಟು ಪ್ರಾರಂಭದಿಂದ 50 ಸಾವಿರ ಎಕರೆ ಭತ್ತ ಎಂತಲೂ ಉಳಿದ ಆಚ್ಚುಕಟ್ಟು ಆರೆ ಖುಷ್ಕಿ ಬೆಳೆ ಬೆಳೆಯಬೇಕೆಂಬ ನಿಬಂಧನೆ ಇರುತ್ತದೆ. ಆದರೆ ಜಲಾಶಯದಲ್ಲಿ ಅತಿ ಹೆಚ್ಚಿನ ಪ್ರಮಾಣದ ನೀರಿರುವುದರಿಂದ ಕೇವಲ 50 ಸಾವಿರ ಎಕರೆ ಪ್ರದೇಶದಲ್ಲಿ ಮಾತ್ರ ಭತ್ತ ಬೆಳೆಯಬೇಕೆಂಬ ನಿಬಂಧನೆಯನ್ನು ಸಡಿಲಿಸುವ ಮುಖಾಯಂತರ ಈಗಿನ ದಂಡವನ್ನು – ತಪ್ಪಿಸಬೇಕೆಂದು ಮಾನ್ಯ ಕಂದಾಯ ಸಚಿವರನ್ನು ರೈತರ ಹಿತದೃಷ್ಟಿಯಿಂದ ಆಗ್ರಹಪಡಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಕಬಿನಿ ಬಂದಂತೆ ನಾಲೆಯಲ್ಲಿ ವಿತರಣಾ ನಾಲೆ 1 ರಿಂದ 40 ರವರೆಗಿನ ಆಚ್ಚುಕಟ್ಟು ಪ್ರದೇಶದಲ್ಲಿ ಭತ್ತವನ್ನು ಬೆಳೆಯುವುದೆಂದು ಮತ್ತು ವಿತರಣಾ ನಾಲೆ 41ರಿಂದ 60ರವರೆಗೆ ಆರೆ ಖುಷ್ಕಿ ಬೆಳೆಯುವುದೆಂದು ನಿರ್ಮಾನಿಸಿ ನಾಲೆಯ ವಿನ್ಯಾಸವನ್ನು ಇದಕ್ಕೆ ಅನುಗುಣವಾಗಿ ತಯಾರಿಸಲಾಗಿದೆ. ವಿತರಣಾ ನಾಲೆ 43ರವರೆಗೆ 1986ರಲ್ಲಿ ನೀರನ್ನು ಹಾಯಿಸಿದ್ದು, ಆ ಸಾಲಿನಿಂದ 5 ವರ್ಷಗಳವರೆಗೆ ನಿಯಮದ ಪ್ರಕಾರ ನೀರಾವರಿ ಕರವನ್ನು ವಿಧಿಸಿರುವುದಿಲ್ಲ. 1991ನೇ ಸಾಲಿನಲ್ಲಿ 42ನೇ ವಿತರಣಾ ನಾಲೆಯಲ್ಲಿ ಸೂಚನೆ (ನೋಟಿಫಿಕೇಶನ್)ಗೆ ವಿರುದ್ಧವಾಗಿ 11,800 ಎಕರೆ ಪ್ರದೇಶದಲ್ಲಿ ಭತ್ತ ಬೆಳೆಯಲಾಗಿದೆ. ಈ ಕ್ರಮವು ಅಧಿಕೃತವಾಗಿ ಸೂಚಿಸಿದ ನಿಯಮದ ಉಲ್ಲಂಘನೆಯಾಗಿದ್ದು, ನಿಯಮಾವಳಿ ಪ್ರಕಾರ ದಂಡ ಕರವನ್ನು ವಿಧಿಸಲಾಗಿದೆ.

ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ನೌಕರರ ಅಧಿಕಾರಿಗಳಿಗೆ ಮುಂಬಡ್ತಿ

ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಅಧ್ಯಕ್ಷಣಿಯವರೇ, ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ನೌಕರ ಅಧಿಕಾರಿಗಳನ್ನು ಅದರಲ್ಲೂ ಮುಖ್ಯವಾಗಿ ಜಂಟಿ ನಿರ್ದೇಶಕರುಗಳಿಗೆ ಮುಂಬಡ್ತಿ ನೀಡಲು ಹಾಲಿ ದರ್ಜೆ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿದ್ದರೂ ಇಲಾಖೇತರ ಸಿಬ್ಬಂದಿಯನ್ನು ಅವರವರ ಮಾತೃ ಇಲಾಖೆಗೆ ವಾಪಸ್ಸು ಕಳುಹಿಸಿ ಇಲಾಖಾ ನೌಕರರ ಅಧಿಕಾರಿಗಳಿಗೆ ಮುಂಬಡ್ತಿ ನೀಡದಿರುವುದರಿಂದ ಅವರಿಗೆ ಉಂಟಾಗುತ್ತಿರುವ ಅನ್ಯಾಯದ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಉಪಾಧ್ಯಕ್ಷಣಿಯವರೇ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು 1982ರಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ ಎಸ್‌ಡಬ್ಲ್ಯೂಎಲ್ 3 ಬಿಇಟಿ 78 (11)ರಲ್ಲಿ ಅನುಮೋದಿತವಾಗಿದೆ. ಈ ನಿಯಮಗಳ ಪರಿಷ್ಕರಣೆ ಸರ್ಕಾರದ ಪರಿಶೀಲನೆಯಲ್ಲಿದೆ. ಇಲಾಖಾ ಅಧಿಕಾರಿಗಳಿಗೆ ಈ ನಿಯಮಗಳ ಪರಿಷ್ಕರಣೆಯ ನಂತರ ಬಡ್ತಿ ನೀಡುವುದನ್ನು ಪರಿಗಣಿಸಲಾಗುವುದು.